**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 2109/2017**

**ಸಿ ಡಬ್ಲ್ಯೂ -14**
**ಪಿ ಡಬ್ಲ್ಯೂ -12**

| | |
|---|---|
| **ಸಾಕ್ಷಿಯ ಹೆಸರು -** | **ರಾಘವೇಂದ್ರ** |
| **ತಂದೆಯ ಹೆಸರು -** | **ಮಾರುತಿ** |
| **ವಯಸ್ಸು -** | **34 ವರ್ಷಗಳು** |
| **ಉದ್ಯೋಗ -** | **ನಿರುದ್ಯೋಗಿ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ 22-01-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಯ ಶೋರೂಂ ಇರುವುದು ಮಾತ್ರ ಗೊತ್ತು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ನಾನು ಈ ಹಿಂದೆ ಬಜಾಜ್ ಫೈನಾನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಅಂದರೆ ಸರಿ. ಆರೋಪಿಯ ಅಂಗಡಿಯಲ್ಲಿ ಸಾಮಾನುಗಳನ್ನು ಖರೀದಿಸಲು ನಮ್ಮ ಫೈನಾನ್ಸ್ ನಿಂದ ದಾಖಲೆಗಳನ್ನು ಪಡೆದು ಗ್ರಾಹಕರಿಗೆ ಸಾಲ ಕೊಡುತ್ತಿದ್ದೇವು ಅಂದರೆ ನನಗೆ ಗೊತ್ತಿಲ್ಲ. 2015 ನೇ ಸಾಲಿನಲ್ಲಿ 1 ನೇ ಆರೋಪಿ ನಮ್ಮ ಕಚೇರಿಗೆ ಬಂದು ಮಲಪನಗುಡಿಯ ಹೇಮಗಿರಿಯಪ್ಪ ಮತ್ತು ಭಾರತಿ ಹೇಮ ಗಿರಿಯಪ್ಪ ಎಂಬುವವರ ಹೆಸರಿನಲ್ಲಿ ಸಾಲ ಮಾಡಿಸಿ ನ್ಯಾಯಾಲಯದ ಮುಂದೆ ಇರುವ

ಆರೋಪಿಯ ಅಂಗಡಿಯಿಂದ ಟಿ.ವಿ ಕೊಡಿಸುವುದಾಗಿ ತಿಳಿಸಿದ್ದ ಅಂದರೆ ಸರಿಯಲ್ಲ. 1 ನೇ ಆರೋಪಿ ಮೇಲೆ ಹೇಳಿದ ಸಾಲ ಪಡೆಯುವವರನ್ನು ಕಚೇರಿಗೆ ಕರೆದುಕೊಂಡು ಬಂದು ದಾಖಲೆಗಳನ್ನು ನೀಡಿ ಟಿ.ವಿ ಖರೀದಿಸಿ ಹೋಗಿದ್ದರು ಅಂದರೆ ನನಗೆ ನೆನಪಿಲ್ಲ. ಅದಾದ ನಂತರ 1 ನೇ ಆರೋಪಿ ಸುಮಾರು 8-10 ಜನರ ದಾಖಲೆಗಳನ್ನು ತಂದು ಸಾಲ ಮಂಜೂರು ಮಾಡಲು ಕೇಳಿದ್ದ ಅಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯು ಸದರಿ ಜನರಿಂದ ದಾಖಲೆಗಳನ್ನು ಪಡೆದು ಅವರ ಹೆಸರಿನಲ್ಲಿ ಸಾಲ ಪಡೆದು ಆ ಜನರಿಗೆ ಸಾಮಾನುಗಳನ್ನು ಕೊಡದೇ ವಂಚಿಸಿರುತ್ತಾರೆ ಎಂದು ನನಗೆ ಗೊತ್ತಾಯಿತು ಅಂದರೆ ಸರಿಯಲ್ಲ. ಹೇಮಗಿರಿಯಪ್ಪ ಮತ್ತು ಭಾರತಿರವರು ಉಳಿದ ಹಣ ಕಟ್ಟದಿದ್ದ ಕಾರಣ ಮೇಲಾಧಿಕಾರಿಗಳು ಸಾಲವನ್ನು ವಸೂಲಿ ಮಾಡಲು ನಮಗೆ ತಿಳಿಸಿದ್ದರು ಅಂದರೆ ಸರಿಯಲ್ಲ. ನಂತರ ಈ ಪ್ರಕರಣ ದಾಖಲಾದ ಬಗ್ಗೆ ಗೊತ್ತಾಯಿತು ಅಂದರೆ ಸರಿಯಲ್ಲ. ದಿಃ 14-08-2016 ರಂದು ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ನೀಡಿಲ್ಲ ಎಂಬ ಹೇಳಿಕೆಯ ಭಾಗವನ್ನು ನಿಪಿಃ 5 ಎಂದು ಗುರುತಿಸಲಾಯಿತು. ನಿಪಿಃ 5 ರಂತೆ ಹೇಳಿಕೆ ನೀಡಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಜಿ ವಿ ಪಿ ವಕೀಲರಿಂದಃ** ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.